# ಜಿಲ್ಲಾ ಪಂಚಾಯತ್, ಮೈಸೂರು
# ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ

3ನೇ ಹಂತದಲ್ಲಿ ಮೈಸೂರು ಜಿಲ್ಲೆಯಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ದಿ:–1–4–2008 ರಿಂದ ಜಾರಿಗೆ ಬಂದಿರುತ್ತದೆ.

## ಉದ್ದೇಶಗಳು:–

- ಸ್ವಇಚ್ಛೆಯಿಂದ ದೈಹಿಕ ಶ್ರಮದ ಕೆಲಸ ಬಯಸುವ ಗ್ರಾಮೀಣ ಪ್ರದೇಶದ ಪ್ರತಿ ಕುಟುಂಬಕ್ಕೆ ಆರ್ಥಿಕ ವರ್ಷದಲ್ಲಿ 100 ದಿನಗಳ ಖಾತರಿ ಉದ್ಯೋಗ ನೀಡುವುದು
- ಉದ್ಯೋಗ ನೀಡುವುದರ ಮೂಲಕ ದೀರ್ಘಕಾಲ ಬಾಳಿಕೆ ಬರುವಂತಹ ಸಮುದಾಯ ಆಸ್ತಿಗಳನ್ನು ನಿರ್ಮಾಣ ಮಾಡುವುದು
- ಗ್ರಾಮೀಣ ಬಡವರ ಜೀವನೋಪಾಯದ ಆಧಾರಗಳನ್ನು ಬಲಪಡಿಸುವುದಲ್ಲದೆ ಪರಿಸರ ಸಂರಕ್ಷಣೆಗೆ ಒತ್ತು
- ಗ್ರಾಮೀಣ ಮಹಿಳೆಯರ ಸಬಲೀಕರಣ
- ಕೂಲಿಗಾಗಿ ವಲಸೆ ಹೋಗುವುದುನ್ನು ತಪ್ಪಿಸುವುದಲ್ಲದೆ ಕುಟುಂಬಕ್ಕೆ ಸಾಮಾಜಿಕ ಭದ್ರತೆ ಒದಗಿಸುವುದು
- ಜಿಲ್ಲೆಯ ಎಲ್ಲಾ 7 ತಾಲ್ಲೂಕಿನ 235 ಗ್ರಾಮ ಪಂಚಾಯತಿಗಳ ಗ್ರಾಮಗಳಲ್ಲಿ ವಾರ್ಡ್/ಗ್ರಾಮ ಸಭೆ ಮುಖಾಂತರ ಕಾಮಗಾರಿಗಳ ಯಾದಿಯನ್ನು ಸಿದ್ಧಪಡಿಸಲಾಗಿದೆ.
- ಜಿಲ್ಲೆಯಲ್ಲಿನ ಬಿ.ಪಿ.ಎಲ್ ಕುಟುಂಬಗಳನ್ನು ಆಧಾರವಾಗಿಟ್ಟುಕೊಂಡು, ಬಿ.ಪಿ.ಎಲ್ ಕುಟುಂಬಗಳ ಎರಡು ಪಟ್ಟಿನ ಸಂಖ್ಯೆಗನುಗುಣವಾಗಿ ಪ್ರತಿ ಕುಟುಂಬಕ್ಕೆ 100 ದಿನಗಳ ಕೂಲಿ ಮತ್ತು ಈಗಿನ ಕೂಲಿ ದಿನ ಒಂದಕ್ಕೆ ರೂ.82 ರಂತೆ ನಿಗದಿಪಡಿಸಿದೆ.
- ನಿಗದಿಪಡಿಸಿರುವಂತೆ, ಜಲ ಸಂರಕ್ಷಣೆ, ಬರಗಾಲ ತಡೆಗಟ್ಟುವಿಕೆ (ಅರಣ್ಯೀಕರಣ) ಸಣ್ಣ ಮತ್ತು ಕಿರು ನೀರಾವರಿ ಕಾಲುವೆಗಳು, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಬಿ.ಪಿ.ಎಲ್ ಕುಟುಂಬಗಳ ಜಮೀನು ಅಭಿವೃದ್ಧಿ/ ನೀರಾವರಿ ಸೌಕರ್ಯ, ಪ್ರವಾಹ ತಡೆಗಟ್ಟುವಿಕೆ, ಶಾಲಾ, ಕಾಲೇಜುಗಳ ಮೈದಾನಗಳು ಸೇರಿದಂತೆ ಸರ್ಕಾರಿ ವಸತಿ ಯೋಜನೆಯ, ಸರ್ಕಾರಿ ಕೃಷಿ, ತೋಟಗಾರಿಕೆ, ರೇಷ್ಮೆ ಕೇಂದ್ರಗಳ ಜಮೀನು ಅಭಿವೃಧ್ಧಿ, ಕೆರೆ ಮತ್ತು ಕಲ್ಯಾಣಿ ಗೋ–ಕಟ್ಟೆಗಳ ಜೀರ್ಣೋದ್ದಾರ, ಗ್ರಾಮೀಣ ಸಂಪರ್ಕ ರಸ್ತೆಗಳ ಅಭಿವೃಧ್ಧಿಯಂತಹ ಕಾಮಗಾರಿಗಳನ್ನು ಗುರುತಿಸಿ, ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿಗಳಲ್ಲಿ ಅನುಮೋದನೆ ಪಡೆಯಲಾಗಿದೆ. ಜಿಲ್ಲಾ ಕಾರ್ಯಕ್ರಮ ಸಮನ್ವಯ ಅಧಿಕಾರಿ/ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿರವರಿಂದ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿ ತಾಲ್ಲೂಕಿನ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳಿಗೆ ಕಳುಹಿಸಿದೆ.

- ಜಿಲ್ಲೆಯಲ್ಲಿ 266424 ಕುಟುಂಬಗಳ ಉದ್ಯೋಗ ನೋಂದಣಿಯನ್ನು ನಿರೀಕ್ಷಿಸಲಾಗಿದ್ದು, ಈ ತನಕ 278872 ಕುಟುಂಬಗಳು ಅಕುಶಲ ಉದ್ಯೋಗಕ್ಕಾಗಿ ನೋಂದಣಿ ಮಾಡಿಕೊಂಡಿವೆ. 104985 ಕುಟುಂಬಗಳಿಗೆ ಉದ್ಯೋಗ ಕಾರ್ಡ್ ಇಲ್ಲಿಯವರೆಗೆ ವಿತರಣೆಯಾಗಿದೆ ಹಾಗೂ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ಹಾಕಲಾಗಿದೆ.
- ಜಿಲ್ಲೆಯಲ್ಲಿ ಎಲ್ಲಾ ಅನುಷ್ಠಾನ/ ಕಾರ್ಯಕ್ರಮ ಏಜೆನ್ಸಿಗಳಿಗೆ ಸಾಮರ್ಥ್ಯಾಭಿವೃದ್ಧಿ ತರಬೇತಿಯನ್ನು ನೀಡಲಾಗಿದೆ.
- ಈತನಕ ಜಿಲ್ಲೆಯಲ್ಲಿ ಐ.ಇ.ಸಿ ಚಟುವಟಿಕೆಯಡಿ ಸರ್ಕಾರದಿಂದ ರೂ. 70.50ಲಕ್ಷ ಬಿಡುಗಡೆಯಾಗಿದ್ದು, ರೂ.54.32ಲಕ್ಷ ಗಳನ್ನು ತಾಲ್ಲೂಕುಗಳಿಗೆ ಬಿಡುಗಡೆ ಮಾಡಲಾಗಿದೆ. ಅಗತ್ಯ ತರಬೇತಿ, ಗೋಡೆ ಬರಹ, ಉದ್ಯೋಗ ಕಾರ್ಡ್, ವಹಿಗಳು, ಅಳತೆ ಪುಸ್ತಕ, ಎನ್.ಎಂ.ಆರ್ ನಮೂನೆಗಳನ್ನು ಪಡೆದು ಕಾರ್ಯಕ್ರಮ ಅಧಿಕಾರಿಗಳಿಗೆ/ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ವಿತರಿಸಿದೆ.
- ಕೇಂದ್ರ ಸರ್ಕಾರದಿಂದ ರೂ.1902.58 ಲಕ್ಷ ರಾಜ್ಯ ಸರ್ಕಾರದಿಂದ ರೂ. 190.258 ಲಕ್ಷ ಒಟ್ಟು ರೂ.2092.838 ಲಕ್ಷ ಅನುದಾನ ಬಿಡುಗಡೆಯಾಗಿದೆ. ಇಲ್ಲಿಯವರೆಗೆ ರೂ.1631.26 ಲಕ್ಷಗಳನ್ನು ತಾಲ್ಲೂಕಿನ ಕಾರ್ಯಕ್ರಮ ಅಧಿಕಾರಿಗಳಿಗೆ ಮರುಹಂಚಿಕೆ ಮಾಡಿ ಬಿಡುಗಡೆಗೊಳಿಸಲಾಗಿದೆ.

**2009-10ನೇ ಸಾಲಿನಲ್ಲಿ ಜಿಲ್ಲೆಯ ಆರ್ಥಿಕ ಮತ್ತು ಭೌತಿಕ ಪ್ರಗತಿ ವಿವರ ದಿನಾಂಕ: 23.06.2009ರ ವರೆಗೆ**

| ಕ್ರ. ಸಂ | ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ | ಒಟ್ಟು |
|---|---|---|
| 1 | ನೋಂದಣಿಯಾಗಿರುವ ಕುಟುಂಬಗಳ ಸಂಖ್ಯೆ | 115553 |
| 2 | ಉದ್ಯೋಗ ಚೀಟಿ ವಿತರಿಸಿರುವ ಕುಟುಂಬಗಳ ಸಂಖ್ಯೆ | 106565 |
| 5 | ಉಪಯೋಗಿಸಿರುವ ಮಸ್ಟರ್ ರೋಲ್‌ಗಳ ಸಂಖ್ಯೆ | 213 |
| 6 | 100 ದಿನ ಕೆಲಸ ಪೂರೈಸಿರುವ ಕುಟುಂಬಗಳ ಸಂಖ್ಯೆ | 22 |
| 7 | ಉತ್ಪತ್ತಿಯಾದ ಮಾನವ ದಿನಗಳು | 44627 |
| 8 | ಖರ್ಚು ಲಕ್ಷಗಳಲ್ಲಿ | 46.76 |